SS – 040

ಮೂರನೇ ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ನವೆಂಬರ್/ಡಿಸೆಂಬರ್ 2018
(CBCS) (F+R) (2015 – 16 and Onwards)
ಕನ್ನಡ ಭಾಷಾ ಪತ್ರಿಕೆ – III
ಸುವರ್ಣ ಸಂಪದ

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70

I. ಅ) ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ. (1×6=6)

ಉರಿ ಕೊಳೆ ದೆಸೆಗಾಣದೆ ದೆಸೆ
ವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ
ಬೆರಸೊಳಜೆ ನೆಗೆದುದಾ ವನ
ಕರಿ ಶರಭ ಕಿಶೋರ ಕಂಠಗರ್ಜನೆ ಬನದೊಳ್.

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

1) ಪಂಪ
2) ಪರುಷ
3) ಮಿಸುನಿ ಸರಪಣಿ
4) ತಮಂಧ.

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : (1×10=10)

1) ‘ಖಾಂಡವವನ ದಹನ’ ಪದ್ಯಭಾಗದಲ್ಲಿ ಕಂಡುಬರುವ ಪರಿಸರದ ದುರಂತವನ್ನು ವಿವರಿಸಿ.
2) ಭವದ ಕೇಡುಗಳಿಂದ ಮುಕ್ತಗೊಳ್ಳುವ ಬಗೆಯು ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ ?

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (2×5=10)

1) ದೃಷ್ಟಿ ಬಂದ ನಂತರ ಶಿವರಾಮಯ್ಯನ ವರ್ತನೆಯಲ್ಲಿ ಆದ ಬದಲಾವಣೆ.
2) ನಂಜೇಗೌಡನು ನಿಂಗಮ್ಮನ ಬಳಿ ವರ್ತಿಸಿದ ರೀತಿ ಮತ್ತು ಅದರ ಪರಿಣಾಮ.
3) ಗಂಗನು ಮುಕ್ಕಣ್ಣನಿಗೆ ಹೊಡೆದಾಗ ಲಿಂಗಣ್ಣನ ಪ್ರತಿಕ್ರಿಯೆ.

SRI BHAGAWAN MAHAVEER JAIN COLLEGE KGF-563 122

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) 'ದೃಷ್ಟಿಲಾಭವಾದದ್ದು ಕಣ್ಣು ಬಂದಾಗ ಅಲ್ಲ, ಅದು ಹೋದಾಗ' ಎಂಬ ಶಿವರಾಮಯ್ಯನ ಹೇಳಿಕೆಯ ಹಿನ್ನೆಲೆಯಲ್ಲಿ 'ದೃಷ್ಟಿ ಲಾಭ' ಕಥೆಯ ಆಶಯವನ್ನು ನಿರೂಪಿಸಿ.

2) ಹಳ್ಳಿಯ ರಾಜಕಾರಣಕ್ಕೆ ಮುಕ್ಕಣ್ಣ ಮತ್ತು ಲಿಂಗಣ್ಣ ಬಲಿಯಾದ ಚಿತ್ರಣವು 'ಮುಕ್ಕಣ್ಣನ ಮುಕ್ತಿ' ಕಥೆಯಲ್ಲಿ ಹೇಗೆ ನಿರೂಪಿತವಾಗಿದೆ ?

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (1×5=5)

SRI BHAGAWAN MAHAVEER JAIN COLLEGE KGF-563 122

1) ವ್ಯಾವಹಾರಿಕ ಭಾಷೆ ಮತ್ತು ಗ್ರಾಂಥಿಕ ಭಾಷೆ.

2) ಭಾಷೆಗಿರುವ 'ಮಾಂತ್ರಿಕ ಶಕ್ತಿ'.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) 'ಪರಸ್ಪರ ಕೊಡು-ಕೊಳ್ಳುವಿಕೆಯ ವ್ಯವಹಾರವು ಯಾವುದೇ ಜೀವಂತ ಭಾಷೆಯ ಲಕ್ಷಣ' – ಈ ಹೇಳಿಕೆಯನ್ನು 'ನಮ್ಮ ಭಾಷೆ' ಲೇಖನದ ಹಿನ್ನೆಲೆಯಲ್ಲಿ ಪರಿಶೀಲಿಸಿ.

2) 'ನಿಷೇಧಗಳು' ಮತ್ತು 'ಹೆಸರುಗಳು' – ಇವುಗಳನ್ನು ಕುರಿತ ಚಿಂತನೆಯು 'ಭಾಷೆಯ ಮಾಂತ್ರಿಕತೆ' ಲೇಖನದಲ್ಲಿ ಮೂಡಿಬಂದಿರುವ ಬಗೆಯನ್ನು ಚರ್ಚಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾದ ಉತ್ತರವನ್ನು ಬರೆಯಿರಿ : (1×5=5)

1) ಕವಿರಾಜಮಾರ್ಗಕಾರನ ಪ್ರಕಾರ 'ಮನುಷ್ಯರ ಹೃದಯ ಸಂಪನ್ನತೆ'.

2) ಧರ್ಮವೆಂಬುದು ಸಾಕ್ಷಾತ್ಕಾರ.

ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರವನ್ನು ಬರೆಯಿರಿ : (1×10=10)

1) ಧಾರ್ಮಿಕ ಸಾಮರಸ್ಯದ ಬಗ್ಗೆ ಯುವಜನಾಂಗ ಚಿಂತನೆ ನಡೆಸಬೇಕಾದ ಅಗತ್ಯತೆಯನ್ನು ಎಚ್.ಎಸ್. ಸತ್ಯನಾರಾಯಣ ಅವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

2) 'ವಿಜ್ಞಾನ ಮತ್ತು ಧರ್ಮಗಳ ಗುಣ ಬೇರೆಯಾದರೂ ಅವುಗಳ ಕಾರ್ಯದ ತಿರುಳು ಒಂದೇ' ಎಂಬ ಹೇಳಿಕೆಯನ್ನು 'ವಿಜ್ಞಾನ ಮತ್ತು ಧರ್ಮ' ಲೇಖನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

---